**ಸಾಕ್ಷಿಯನ್ನು ವಿಧಿಬದ್ಧವಾಗಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ಶ್ರೀ ಬಿ ಎಂ ಪ್ರತಿವಾದಿಯರ ಪರ ವಕೀಲರಿಂದ ಃ-**

ದಾವಾ ಆಸ್ತಿಯ ಸರ್ವೆ ನಂಬರ್ **33.** ಸರ್ವೆ ನಂಬರ್ **33** ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ, ಆದರೆ ನನಗೆ **2** ಎಕರೆ ಸೇರಿರುತ್ತದೆ. ದಾವಾಆಸ್ತಿಯ ಚಕ್ಕುಬಂದಿ ಪೂರ್ವಕ್ಕೆಃ ನಾಗಣ್ಣನವರ ಜಮೀನು, ಪಶ್ಚಿಮಕ್ಕೆಃ ಮಲ್ಲಯ್ಯನವರ ಜಮೀನು, ಉತ್ತರಕ್ಕೆಃ ರಸ್ತೆ, ದಕ್ಷಿಣಕ್ಕೆಃ ರವಿರವರ ಜಮೀನು. ನಾಗಣ್ಣ ಅಂದರೆ ಮಲ್ಲಿಕಾರ್ಜುನ ಗ್ರೂಪ್ಸ್ ಗೆ ಸೇರಿದವರಾಗಿರುತ್ತಾರೆ. ಸದರಿ ನಾಗಣ್ಣನವರ ಆಸ್ತಿಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ನಾಗಣ್ಣನವರ ಆಸ್ತಿಯ ಸರ್ವೆ ನಂಬರ್ **33/1** ಸಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಮೊದಲಿಗೆ ಸದರಿ ಸರ್ವೆ ನಂಬರ್ ಬಿ ಆರ್ ವೆಂಕಟೇಶ್ ರವರಿಗೆ ಮಂಜೂರಾಗಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನಾಗಣ್ಣನವರು ಅವರ ಆಸ್ತಿಗೆ ಬೇಲಿ ಹಾಕಿಕೊಂಡಿರುತ್ತಾರೆ. ಸದರಿ ನಾಗಣ್ಣನವರು ದಿಃ **06-04-1994** ರಂದು ಮಲ್ಲಿಕಾರ್ಜುನ ಗ್ರೂಪ್ಸ್ ಹಾಗೂ ಅವರ ಕುಟುಂಬದವರ ಕಡೆಯಿಂದ ಕ್ರಯಕ್ಕೆ ಪಡೆದ ಬಗ್ಗೆ ನನಗೆ ಗೊತ್ತಿಲ್ಲ. ಪಶ್ಚಿಮದ ಕಡೆ ಇರುವ ಮಲ್ಲಯ್ಯನವರಿಗೆ ಅವರ ಆಸ್ತಿ ದರಕಾಸ್ತಿನ ಮೂಲಕ ಬಂದಿರುತ್ತದೆ. ನನಗೆ ದಾವಾ ಆಸ್ತಿ **1983** ರಲ್ಲಿ ಮಂಜೂರಾಗಿರುತ್ತದೆ.

ನಿಪಿ-**3** ರಲ್ಲಿ ತೋರಿಸಿರುವ ಶಾಂತಮ್ಮ ರವರ ಆಸ್ತಿ ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ನಿಪಿ-**3** ರಲ್ಲಿ ತೋರಿಸಿರುವ ದ್ಯಾವಮ್ಮ, ಸಿದ್ದಯ್ಯ ಮತ್ತು ಈರಯ್ಯ ರವರ ಆಸ್ತಿಗಳು ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಪಿ-**3** ರಲ್ಲಿ ಸರ್ವೆ ನಂಬರ್ **33/1** ಎ ಎಂದು ಬರೆದಿದೆ ಎಂದರೆ ಸರಿ. ಸದರಿ ಪಹಣಿಯಲ್ಲಿ ನನ್ನ ಹಾಗೂ ಮಲ್ಲಯ್ಯನವರ ಹೆಸರು ನಮೂದಾಗಿದೆ ಎಂದರೆ ಸರಿ. ನನಗೆ ದಾವಾ ಆಸ್ತಿ ಮಂಜೂರಾಗುವ ಸಮಯದಲ್ಲಿ ಸರ್ವೆ ನಂಬರ್ **33/1** ಎ, **33/1** ಬಿ ಇತ್ತು ಎಂದರೆ ಸರಿ. ನಾಗಣ್ಣನವರ ಹೆಸರಿನಲ್ಲಿ ಇರುವ ಆಸ್ತಿಯ ಸರ್ವೆ ನಂಬರ್ ಈಗಲೂ ಸಹ **33/1** ಸಿ ಇರುವ ಬಗ್ಗೆ ನಾನು ದಾಖಲೆ ನೋಡಿರುವುದಿಲ್ಲ. ನಾನು ಜಮೀಲ್ ಅಹಮದ್ ಹಾಗೂ ಇತರೆ ಮೂರು ನಾಲ್ಕು ಜನರ ವಿರುದ್ದ ದಾವೆ ಸಲ್ಲಿಸಿರುತ್ತೇನೆ, ಅವರ ಹಸೆರು ನನಗೆ ನೆನಪಿಲ್ಲ. ನಾನು ವಕೀಲರಾಗಿದ್ದ ಜಮೀಲ್ ಅಹಮದ್ ರವರನ್ನು ನೋಡಿರುತ್ತೇನೆ. ಪ್ರತಿವಾದಿಯರು ಮಲ್ಲಯ್ಯನ ವಿರುದ್ದ ಇದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದ ಬಗ್ಗೆ ನನಗೆ ಗೊತ್ತಿದೆ. ಮಲ್ಲಯ್ಯನವರು ಪ್ರತಿವಾದಿಯರ ವಿರುದ್ದ ಇನ್ನೊಂದು ದಾವೆ ಹಾಕಿರುವ ಬಗ್ಗೆ ನನಗೆ ಮಾಹಿತಿ ಇದೆ. ಪ್ರತಿವಾದಿಯರಿಗೆ ಸರ್ವೆ ನಂಬರ್ **33** ರಲ್ಲಿ ಜಮೀನು ಇರುವ

ಬಗ್ಗೆ ನನಗೆ ಗೊತ್ತಿಲ್ಲ. ಇಲ್ಲಿನ ಪ್ರತಿವಾದಿಗಳು ಮಲ್ಲಯ್ಯನ ವಿರುದ್ದ ಹಾಕಿದ್ದ ದಾವೆ ವಜಾ ಆಗಿದೆ ಎಂದು ನನಗೆ ಮಲ್ಲಯ್ಯನವರು ತಿಳಿಸಿರುತ್ತಾರೆ. ಮಲ್ಲಯ್ಯನವರು ಹಾಕಿರುವ ದಾವೆಯಲ್ಲಿ ಅವರ ವಿರುದ್ದ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಆಗಿರುವ ವಿಚಾರ ಮಲ್ಲಯ್ಯನವರು ಒಪ್ಪಿಕೊಂಡು ದಾವಾದಲ್ಲಿ ನಮೂದಿಸಿ ದಾವಾ ಹಾಕಿರುವ ಬಗ್ಗೆ ನನಗೆ ಗೊತ್ತಿಲ್ಲ. ಮಲ್ಲಯ್ಯನವರ ಆಸ್ತಿಯ ಪಶ್ಚಿಮಕ್ಕೆ ಹಲಗಯ್ಯನವರ ಆಸ್ತಿ ಬರುವ ಬಗ್ಗೆ ನನಗೆ ಗೊತ್ತಿಲ್ಲ. ಹಲಗಯ್ಯ ಮತ್ತು ನಾಗಣ್ಣ ರವರ ಆಸ್ತಿಗಳ ನಡುವೆ ಇರುವ ಜಾಗ ಲಿಂಗಮ್ಮನವರಿಗೆ 1975 ರಲ್ಲಿ ಸರ್ಕಾರದಿಂದ ಮಂಜೂರಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. 1975 ರಲ್ಲಿ ಮಂಜೂರಾದ ಸಮಯದಲ್ಲಿ ಸರ್ವೆ ನಂಬರ್ 33/1 ಎ, 33/1 ಬಿ ಮತ್ತು 33/1 ಸಿ ಎಂದು ಪೋಡಾಗಿತ್ತು ಎಂದರೆ ಸರಿಯಲ್ಲ. ಲಿಂಗಮ್ಮನವರ ಹೆಸರಿಗೆ ಮಂಜೂರಾಗಿದ್ದ ಆಸ್ತಿಗೆ 1975 ರಲ್ಲಿ 33/1 ಬಿ ಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 33 ರ ಉತ್ತರ ದಿಕ್ಕಿನಲ್ಲಿ ರಸ್ತೆ ಇದ್ದು ಸದರಿ ರಸ್ತೆ ಸಕಲೇಶಪುರ ಮುಖ್ಯ ರಸ್ತೆಯಿಂದ ಪ್ರಸಾದಿಹಳ್ಳಿಗೆ ಹೋಗುತ್ತದೆ. ಅದೇ ರಸ್ತೆ ನಮ್ಮ ಆಸ್ತಿಯ ಉತ್ತರ ದಿಕ್ಕಿನಲ್ಲಿದೆ. ಲಿಂಗಮ್ಮನವರಿಗೆ 1975 ರಲ್ಲಿ 33/1 ಬಿ ಮಂಜೂರಾದ ಸಮಯದಲ್ಲಿ ಪ್ರಸಾದಿಹಳ್ಳಿಗೆ ಹಾದುಹೋಗುವ ರಸ್ತೆ ಸರ್ಕಾರಕ್ಕೆ ಬಿಟ್ಟುಕೊಡತಕ್ಕದ್ದು ಎಂಬ ಬಗ್ಗೆ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ರಸ್ತೆ ಇರುವ ಬಗ್ಗೆ ಮಂಜೂರಾತಿ ಪತ್ರದಲ್ಲಿ ಕರಾಬನ್ನು ಕಳೆದಿರುತ್ತಾರೆ ಎಂದರೆ ಸರಿಯಲ್ಲ. ಲಿಂಗಮ್ಮನವರು ತೀರಿಹೋದ ನಂತರ ಅವರ ಮಗಳಾದ ಶಾಂತಮ್ಮನವರ ಹೆಸರಿಗೆ ಸರ್ವೆ ನಂಬರ್ 33/1 ಬಿ ಖಾತೆಯಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಅವರ ಜಮೀನು ಅವರಿಗೆ ಬಂದಿರಬಹುದು. ಶಾಂತಮ್ಮನವರು ಹಾಗೂ ಅವರ ತಾಯಿ ನಿಂಗಮ್ಮನವರು ಸದರಿ ಸರ್ವೆ ನಂಬರ್ ನಲ್ಲಿ ಅನುಭವ ಮಾಡುತ್ತಿರುವ ಬಗ್ಗೆ ನನಗೆ ಗೊತ್ತಿಲ್ಲ.

ನನ್ನ ಊರು ಹಿರಿಕೊಲೆ. ನಾನು ದಾವೆಯಲ್ಲಿ ಸನ್ಯಾಸಿಹಳ್ಳಿ ಗ್ರಾಮದ ವಾಸಿ ಎಂದು ತೋರಿಸಿದ್ದೇನೆ ಆದರೆ ಜಮೀನು ಹಿರಿಕೊಲೆ ಗ್ರಾಮಕ್ಕೆ ಸೇರಿರುತ್ತದೆ. 15-10-1975 ರಲ್ಲಿ ಸರ್ವೆ ನಂಬರ್ 33/1 ಎ, 33/1 ಬಿ ಮತ್ತು 33/1 ಸಿ ಎಂದು ಪೋಡಾಗಿರುವ ಬಗ್ಗೆ ದಾಖಲೆ ಇದೆ ಎಂದರೆ ಸರಿಯಲ್ಲ. ನನಗೆ ಸರ್ವೆ ನಂಬರ್ 33/1 ಎ ರಲ್ಲಿ ಮಂಜೂರಾಗಿದ್ದು ಅದರ ಸರ್ವೆ ನಂಬರ್ 33/1 ಎ ಪಹಣಿಯಲ್ಲೂ ಸಹ ನಮೂದಾಗಿದೆ ಎಂದರೆ ಸರಿ.

ಸರ್ವೆ ನಂಬರ್ 33/1 ಸಿ ಮತ್ತು ಹಲಗಯ್ಯನವರ ಆಸ್ತಿಯ ನಡುವೆ ಇರುವ ಜಾಗ ಇಲ್ಲಿನ ಪ್ರತಿವಾದಿಗಳಿಗೆ ಸೇರಿರುವ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 33/1 ಬಿ ಆಸ್ತಿಯನ್ನು ಪ್ರತಿವಾದಿಗಳು ದಿಃ 08-02-2007 ರಂದು ಶಾಂತಮ್ಮನವರ ಕಡೆಯಿಂದ ಶುದ್ಧ ಕ್ರಯಕ್ಕೆ ಪಡೆದಿರುವ ಬಗ್ಗೆ ನನಗೆ ಗೊತ್ತಿಲ್ಲ.

ಆದರೆ ಸರ್ವೆ ನಂಬರ್ 33/1 ಬಿ ಯಲ್ಲಿ ನನಗೆ ಮತ್ತು ಮಲ್ಲಯ್ಯನವರಿಗೆ ಸೇರಿದ ಆಸ್ತಿ ಇದೆ. ಸರ್ವೆ ನಂಬರ್ 33/1 ಬಿ ಗೆ ಸಂಬಂಧಿಸಿದಂತೆ ನಾನು ದಾವೆ ಹಾಕಿರುತ್ತೇನೆ. ಮೊದಲಿಗೆ ಸರ್ವೆ ನಂಬರ್ 33/1 ಎ ಎಂದು ನಮೂದಾಗಿದ್ದು ನಂತರ ಸರ್ವೆ ನಂಬರ್ 33 ಎಂದು ಪಹಣಿಗಳಲ್ಲಿ ನಮೂದಾಗಿದೆ ಎಂದರೆ ಸರಿ.

*(ಸಾಕ್ಷಿಗೆ ತಲೆ ಸುತ್ತುತ್ತಿರುವ ಕಾರಣ ಸಮಯಾವಕಾಶ ಬೇಕು ಎಂದು ಕೇಳಿದ್ದು ಆದರಂತೆ ಸಮಯಾವಕಾಶ ನೀಡಿ ಮುಂದಿನ ಪಾಟೀ ಸವಾಲನ್ನು ಮುಂದೂಡಲಾಯಿತು.)*

ಓ ಹೇ ಕೇ ಸ ಇ ಒ

ಸಿವಿಲ್ ಜಡ್ಜ್ ಬೇಲೂರು

Case Called.

One Kempaiah is present and his affidavit in lieu of chief examination filed and examined as PW.1.

Ex.P.1 to Ex.P.7 are marked.

**For cross-examination of PW.1.**

Call on: 21-12-2020.

Civil Judge: Belur